8. ಆಗ- "ಓ ನನ್ನ ಪ್ರಭೂ ನನ್ನ ಪತ್ನಿಯು ಬಂಜೆಯಾಗಿದ್ದು ನಾನು ಅತಿ ವೃದ್ಧಾಪ್ಯದಿಂದ ಒಣಗಿ ಹೋಗಿರುವಾಗ ನನ್ನಲ್ಲಿ ಬಾಲಕನುಂಟಾಗುವುದು ಹೇಗೆ?" ಎಂದು ಕೇಳಿದರು.

قَالَ رَبِّ اَنّٰى يَكُوْنُ لِىْ غُلٰمٌ وَّ كَانَتِ امْرَاَتِىْ عَاقِرًا وَّقَدْ بَلَغْتُ مِنَ الْكِبَرِ عِتِيًّا ﴿٨﴾

9. ಆಗ (ಹೀಗೆ) ಉತ್ತರ ಸಿಕ್ಕಿತು- "ಹಾಗೆಯೇ ಆಗುವುದು.[1] ಇದು ನಮಗೊಂದು ಅತಿ ಚಿಕ್ಕ ವಿಷಯವೆಂದು ನಿಮ್ಮ ಪ್ರಭು ಹೇಳುತ್ತಾನೆ. ಇದಕ್ಕೆ ಮುಂಚೆ ನೀನು ಏನೂ ಆಗಿಲ್ಲದಿದ್ದಾಗ ನಾನು ನಿನ್ನನ್ನು ಸೃಷ್ಟಿಸಿದ್ದೆ ತಾನೆ!"

قَالَ كَذٰلِكَ ۚ قَالَ رَبُّكَ هُوَ عَلَىَّ هَيِّنٌ وَّقَدْ خَلَقْتُكَ مِنْ قَبْلُ وَلَمْ تَكُ شَيْـًٔا ﴿٩﴾

10. ಆಗ ಝಕರಿಯ್ಯಾ, "ಓ ನನ್ನ ಪ್ರಭೂ, ನನಗೊಂದು ಸಂಕೇತವನ್ನು ನಿಶ್ಚಯಿಸಿ ಕೊಡು" ಎಂದಾಗ "ನೀನು ಎಡೆಬಿಡದೆ ಮೂರು ದಿನ ಜನರೊಡನೆ ಮಾತನಾಡಲಾಗದಿರುವುದೇ ನಿನಗೆ ಸಂಕೇತ" ಎಂದು ಹೇಳಲಾಯಿತು.

قَالَ رَبِّ اجْعَلْ لِّىْۤ اٰيَةً ؕ قَالَ اٰيَتُكَ اَلَّا تُكَلِّمَ النَّاسَ ثَلٰثَ لَيَالٍ سَوِيًّا ﴿١٠﴾

11. ಆ ಪ್ರಕಾರ ಅವರು ಕೊಠಡಿಯಿಂದ ಹೊರಟು ತನ್ನ ಜನಾಂಗದ ಮುಂದೆ ಬಂದರು ಮತ್ತು ಬೆಳಗು ಬೈಗುಗಳಲ್ಲಿ ಕೀರ್ತನೆ ಮಾಡಿರೆಂದು ಅವರಿಗೆ ಸಂಜ್ಞೆಯ ಮೂಲಕ ಆದೇಶಿಸಿದರು.

فَخَرَجَ عَلٰى قَوْمِهٖ مِنَ الْمِحْرَابِ فَاَوْحٰۤى اِلَيْهِمْ اَنْ سَبِّحُوْا بُكْرَةً وَّعَشِيًّا ﴿١١﴾

12. "ಓ ಯಹ್ಯಾ ದಿವ್ಯ ಗ್ರಂಥವನ್ನು ಬಿಗಿಹಿಡಿದುಕೋ"[2] ನಾವು ಅವರಿಗೆ ಬಾಲ್ಯದಲ್ಲೇ ಹುಕ್ಮ್[3] ಪ್ರದಾನ ಮಾಡಿದೆವು-

يٰيَحْيٰى خُذِ الْكِتٰبَ بِقُوَّةٍ ؕ وَاٰتَيْنٰهُ الْحُكْمَ صَبِيًّا ﴿١٢﴾

13. ಮತ್ತು ನಮ್ಮ ಕಡೆಯಿಂದ ಅವರಿಗೆ ಕೋಮಲ ಹೃದಯ ಹಾಗೂ ಪಾವಿತ್ರ್ಯವನ್ನು ನೀಡಿದೆವು. ಅವರು ಮಹಾ ಧರ್ಮನಿಷ್ಠರಾಗಿದ್ದರು-

وَّحَنَانًا مِّنْ لَّدُنَّا وَزَكٰوةً ؕ وَكَانَ تَقِيًّا ﴿١٣﴾

14. ಮತ್ತು ಮಾತಾಪಿತರಿಗೆ ವಿಧೇಯರಾಗಿದ್ದರು. ಅವರು ಉದ್ಧಟ ಹಾಗೂ ಆಜ್ಞೋಲ್ಲಂಘಕರಾಗಿರಲಿಲ್ಲ.

وَّبَرًّا بِوَالِدَيْهِ وَلَمْ يَكُنْ جَبَّارًا عَصِيًّا ﴿١٤﴾

15. ಅವರ ಮೇಲೆ ಅವರು ಜನಿಸಿದ ದಿನವೂ ಅವರು ಮರಣ ಹೊಂದುವ ದಿನವೂ ಅವರು ಜೀವಂತಗೊಳಿಸಿ ಎಬ್ಬಿಸಲ್ಪಡುವ ದಿನವೂ ಶಾಂತಿಯಿರಲಿ.

وَسَلٰمٌ عَلَيْهِ يَوْمَ وُلِدَ وَيَوْمَ يَمُوْتُ وَيَوْمَ يُبْعَثُ حَيًّا ﴿١٥﴾

1. ಅರ್ಥಾತ್- ನಿನ್ನ ವೃದ್ಧಾಪ್ಯ ಮತ್ತು ನಿನ್ನ ಪತ್ನಿಯ ಬಂಜೆತನದ ಹೊರತಾಗಿಯೂ ನಿನಗೆ ಗಂಡು ಮಗು ಹುಟ್ಟುವುದು.
2. ದೇವಾದೇಶದಂತೆ ಹ. ಯಹ್ಯಾ(ಅ) ಹುಟ್ಟಿದರು ಮತ್ತು ಯೌವನಕ್ಕೆ ತಲಪಿದರು ಎಂಬ ವಿವರಗಳನ್ನು ಮಧ್ಯದಲ್ಲಿ ಬಿಟ್ಟು ಬಿಡಲಾಗಿದೆ.
3. 'ಹುಕ್ಮ್' ಎಂದರೆ ನಿರ್ಧಾರ ಶಕ್ತಿ, ಸಂಶೋಧನಾ ಸಾಮರ್ಥ್ಯ, ಧರ್ಮದ ಪರಿಜ್ಞಾನ, ವ್ಯವಹಾರಗಳಿಗೆ ಸಂಬಂಧಿಸಿದಂತೆ ಸರಿಯಾದ ಅಭಿಪ್ರಾಯ ತಾಳುವ ಸಾಮರ್ಥ್ಯ ಮತ್ತು ಅಲ್ಲಾಹನ ವತಿಯಿಂದ ತೀರ್ಮಾನ ಮಾಡುವ ಅಧಿಕಾರ.

16. ಓ ಪೈಗಂಬರರೇ, ಈ ಗ್ರಂಥದಲ್ಲಿ ಮರ್ಯಮರ ವಿಷಯ ಪ್ರಸ್ತಾಪಿಸಿರಿ. ಅವರು ತನ್ನವರಿಂದ ಸರಿದು ಪೂರ್ವದಿಕ್ಕಿನಲ್ಲಿ[4] ಏಕಾಂತ ವಾಸದಲ್ಲಿದ್ದಾಗ-

وَاذْكُرْ فِي الْكِتٰبِ مَرْيَمَ ۘ إِذِ انْتَبَذَتْ مِنْ أَهْلِهَا مَكَانًا شَرْقِيًّا ﴿١٦﴾

17. ಹಾಗೂ ತೆರೆಯನ್ನಿಳಿಸಿ ಅವರಿಂದ ಮರೆಯಾಗಿ ಕುಳಿತಿದ್ದ[5] ಸ್ಥಿತಿಯಲ್ಲಿ ನಾವು ಅವರ ಬಳಿಗೆ ನಮ್ಮ ದೇವಚರರನ್ನು ಕಳುಹಿಸಿದೆವು. ಅವನು ಅವರ ಮುಂದೆ ಓರ್ವ ಪೂರ್ಣ ಮನುಷ್ಯ ರೂಪದಲ್ಲಿ ಪ್ರತ್ಯಕ್ಷನಾದನು.

فَاتَّخَذَتْ مِنْ دُونِهِمْ حِجَابًا ۖ فَأَرْسَلْنَا إِلَيْهَا رُوحَنَا فَتَمَثَّلَ لَهَا بَشَرًا سَوِيًّا ﴿١٧﴾

18. ಮರ್ಯಮ್- ಥಟ್ಟನೆ, "ನೀನೊಬ್ಬ ದೇವಭಯವುಳ್ಳವನಾಗಿದ್ದರೆ ನಾನು ನಿನ್ನಿಂದ ದಯಾಮಯನಾದ ದೇವನ ಅಭಯ ಯಾಚಿಸುತ್ತೇನೆ" ಎಂದರು.

قَالَتْ إِنِّي أَعُوذُ بِالرَّحْمٰنِ مِنْكَ إِنْ كُنْتَ تَقِيًّا ﴿١٨﴾

19. ಆಗ ಅವನು, "ನಾನು ನಿಮ್ಮ ಪ್ರಭುವಿನ ದೂತನಾಗಿರುತ್ತೇನೆ ಮತ್ತು ನಿಮಗೆ ಓರ್ವ ಪವಿತ್ರ ಬಾಲಕನನ್ನು ಕೊಡಲಿಕ್ಕಾಗಿ ಬಂದಿರುತ್ತೇನೆ" ಎಂದನು.

قَالَ إِنَّمَا أَنَا رَسُولُ رَبِّكِ ۖ لِأَهَبَ لَكِ غُلٰمًا زَكِيًّا ﴿١٩﴾

20. ಆಗ ಮರ್ಯಮ್, "ನನ್ನನ್ನು ಪುರುಷನಾರೂ ಮುಟ್ಟದೆ ಇರುವಾಗ ನನ್ನಲ್ಲಿ ಬಾಲಕನಾಗುವುದು ಹೇಗೆ? ಮತ್ತು ನಾನೇನೂ ದುರಾಚಾರಿ ಸ್ತ್ರೀಯಲ್ಲ" ಎಂದರು.

قَالَتْ أَنّٰى يَكُونُ لِي غُلٰمٌ وَلَمْ يَمْسَسْنِي بَشَرٌ وَلَمْ أَكُ بَغِيًّا ﴿٢٠﴾

21. ಆಗ ದೇವಚರರು, "ಹಾಗೆಯೇ ಆಗುವುದು[6] ಇದು ನನಗೆ ಬಹಳ ಸುಲಭವಾದುದೆಂದೂ ಆ ಬಾಲಕನನ್ನು ಜನರಿಗೆ ಒಂದು ನಿದರ್ಶನವನ್ನಾಗಿ[7] ಮತ್ತು ನಮ್ಮ ಕಡೆಯಿಂದ ಒಂದು ಕರುಣೆಯನ್ನಾಗಿ ಮಾಡಲಿಕ್ಕೋಸ್ಕರ ನಾವು ಹಾಗೆ ಮಾಡುವೆವೆಂದೂ ನಿನ್ನ ಪ್ರಭು ಹೇಳುತ್ತಾನೆ. ಈ ಕಾರ್ಯ ಆಗಿಯೇ ತೀರಬೇಕಾಗಿದೆ" ಎಂದನು.

قَالَ كَذٰلِكِ ۚ قَالَ رَبُّكِ هُوَ عَلَيَّ هَيِّنٌ ۖ وَلِنَجْعَلَهُ آيَةً لِلنَّاسِ وَرَحْمَةً مِنَّا ۚ وَكَانَ أَمْرًا مَقْضِيًّا ﴿٢١﴾

22. ಮರ್ಯಮರಿಗೆ ಆ ಮಗುವಿನ ಗರ್ಭ ಉಂಟಾಯಿತು ಮತ್ತು ಅವರು ಆ ಗರ್ಭ ಸಹಿತ ದೂರದ ಒಂದು ಸ್ಥಳಕ್ಕೆ ಹೋದರು.

فَحَمَلَتْهُ فَانْتَبَذَتْ بِهِ مَكَانًا قَصِيًّا ﴿٢٢﴾

23. ತರುವಾಯ ಪ್ರಸವ ವೇದನೆಯು ಅವರನ್ನು ಒಂದು ಖರ್ಜೂರದ

فَأَجَاءَهَا الْمَخَاضُ إِلٰى جِذْعِ النَّخْلَةِ ۚ

4. ಅರ್ಥಾತ್- ಬೈತುಲ್ ಮುಕದ್ದಿಸ್‌ನ ಪಶ್ಚಿಮ ಭಾಗದಲ್ಲಿ.
5. ಅರ್ಥಾತ್- ಇಅ್‌ತಿಕಾಫ್‌ನಲ್ಲಿ ಕುಳಿತಿದ್ದರು.
6. ಅರ್ಥಾತ್- ಪುರುಷನ ಸ್ಪರ್ಶವಿಲ್ಲದೆಯೇ ನಿನಗೆ ಮಗು ಹುಟ್ಟುವುದು.
7. ಅರ್ಥಾತ್- ನಾವು ಆ ಮಗುವನ್ನು ಜೀವಂತ ಪವಾಡವಾಗಿ ಮಾಡಬಯಸುತ್ತೇವೆ.

ಮರದೆಡೆಗೆ ತಲುಪಿಸಿತು. ಅವರು, "ಅಕಟ ನಾನು ಇದಕ್ಕಿಂತ ಮುಂಚೆ ಸತ್ತು ಹೋಗಿದ್ದರೆ! ಮತ್ತು ಹೇಳ ಹೆಸರಿಲ್ಲದಂತೆ ಅಳಿದು ಹೋಗಿದ್ದರೆ (ಚೆನ್ನಾಗಿತ್ತು)" ಎನ್ನತೊಡಗಿದರು.[8]

قَالَتْ يَٰلَيْتَنِى مِتُّ قَبْلَ هَٰذَا وَكُنتُ
نَسْيًا مَّنسِيًّا ﴿٢٣﴾

24. ದೇವಚರನು ಕಾಲಬಳಿಯಿಂದ ಅವರನ್ನು ಕೂಗಿ ಇಂತೆಂದನು- "ಮರುಗಬೇಡಿರಿ ನಿಮ್ಮ ಪ್ರಭು ನಿಮ್ಮ ತಳಭಾಗದಲ್ಲೊಂದು ಚಿಲುಮೆಯನ್ನು ಹರಿಸಿ ಬಿಟ್ಟಿದ್ದಾನೆ.

فَنَادَىٰهَا مِن تَحْتِهَآ أَلَّا تَحْزَنِى قَدْ
جَعَلَ رَبُّكِ تَحْتَكِ سَرِيًّا ﴿٢٤﴾

25. ಮತ್ತು ನೀವು ಆ ಮರದ ಕಾಂಡವನ್ನು ಹಿಡಿದು ಅಲುಗಾಡಿಸಿರಿ. ನಿಮ್ಮ ಮೇಲೆ ಹಸನಾದ ಖರ್ಜೂರದ ಹಣ್ಣುಗಳು ಉದುರಿ ಬೀಳುವುವು.

وَهُزِّىٓ إِلَيْكِ بِجِذْعِ ٱلنَّخْلَةِ تُسَٰقِطْ
عَلَيْكِ رُطَبًا جَنِيًّا ﴿٢٥﴾

26. ಈ ರೀತಿಯಲ್ಲಿ ನೀವು ತಿಂದು, ಕುಡಿದು ಕಣ್ಮನಗಳನ್ನು ತಣಿಸಿರಿ. ನೀವು ಮಾನವರಾರನ್ನಾದರೂ ಕಂಡರೆ -"ನಾನು ಕರುಣಾನಿಧಿ (ಅಲ್ಲಾಹ್)ಗಾಗಿ ಉಪವಾಸ ವ್ರತದ ಹರಕೆ ಹೊತ್ತಿರುವುದರಿಂದ ಇಂದು ಯಾರೊಡನೆಯೂ ಮಾತನಾಡಲಾರೆನೆಂದು- ಹೇಳಿಬಿಡಿರಿ.

فَكُلِى وَٱشْرَبِى وَقَرِّى عَيْنًا ۖ فَإِمَّا
تَرَيِنَّ مِنَ ٱلْبَشَرِ أَحَدًا فَقُولِىٓ إِنِّى
نَذَرْتُ لِلرَّحْمَٰنِ صَوْمًا فَلَنْ أُكَلِّمَ
ٱلْيَوْمَ إِنسِيًّا ﴿٢٦﴾

27. ಅನಂತರ ಅವರು ಆ ಮಗುವನ್ನೆತ್ತಿಕೊಂಡು ತನ್ನ ಜನಾಂಗದ ಬಳಿಗೆ ಹೋದರು. ಜನರು, "ಓ ಮರ್ಯಮ್! ನೀನು ಘೋರ ಪಾತಕವನ್ನೆಸಗಿ ಬಿಟ್ಟೆ.

فَأَتَتْ بِهِۦ قَوْمَهَا تَحْمِلُهُۥ ۖ قَالُوا۟ يَٰمَرْيَمُ
لَقَدْ جِئْتِ شَيْـًٔا فَرِيًّا ﴿٢٧﴾

28. ಓ ಹಾರೂನನ ಸಹೋದರಿ![9] ನಿನ್ನ ತಂದೆ ಕೆಟ್ಟವನಾಗಿರಲಿಲ್ಲ. ನಿನ್ನ ತಾಯಿಯೂ ದುಶ್ಶೀಲೆಯಾಗಿರಲಿಲ್ಲ" ಎನ್ನತೊಡಗಿದರು.

يَٰٓأُخْتَ هَٰرُونَ مَا كَانَ أَبُوكِ ٱمْرَأَ
سَوْءٍ وَمَا كَانَتْ أُمُّكِ بَغِيًّا ﴿٢٨﴾

29. ಆಗ ಮರ್ಯಮ್, ಮಗುವಿನ ಕಡೆಗೆ ಇಷಾರೆ ಮಾಡಿದರು. ಆಗ ಜನರು, "ಇದು ತೊಟ್ಟಿಲಲ್ಲಿ ಬಿದ್ದಿರುವಂತಹ ಒಂದು ಶಿಶು, ಇದರೊಡನೆ ನಾವೇನು ಮಾತನಾಡಬಹುದು?" ಎಂದರು.

فَأَشَارَتْ إِلَيْهِ ۖ قَالُوا۟ كَيْفَ نُكَلِّمُ
مَن كَانَ فِى ٱلْمَهْدِ صَبِيًّا ﴿٢٩﴾

30. ಮಗು (ಹೀಗೆ) ಮಾತನಾಡತೊಡಗಿತು: "ನಾನು ಅಲ್ಲಾಹನ

قَالَ إِنِّى عَبْدُ ٱللَّهِ ءَاتَىٰنِىَ ٱلْكِتَٰبَ

8. ಈ ಮಾತಿನ ಹಿನ್ನೆಲೆಯನ್ನು ಗಮನಿಸಿದಾಗ ಇದನ್ನು ಹ. ಮರ್ಯಮ್(ಅ) ಹೆರಿಗೆ ಬೇನೆಯಿಂದಾಗಿ ಹೇಳಿರಲಿಲ್ಲವೆಂದು ತಿಳಿಯುತ್ತದೆ. ತಂದೆಯಿಲ್ಲದೆ ಹುಟ್ಟಿದ ಈ ಮಗುವನ್ನು ನಾನು ಎಲ್ಲಿಗೆ ಕೊಂಡೊಯ್ಯಲಿ ಎಂಬ ವ್ಯಥೆಯಿಂದ ಅವರು ಇದನ್ನು ಹೇಳಿದ್ದರು. ಆದ್ದರಿಂದಲೇ ಗರ್ಭವತಿಯಾಗಿದ್ದಾಗ ಅವರು ಒಬ್ಬಂಟಿಯಾಗಿ ದೂರದ ಪ್ರದೇಶಕ್ಕೆ ಹೋಗಿ ಬಿಟ್ಟಿದ್ದರು. ಇಷ್ಟಾಗಿ ಅವರ ತಾಯಿ ಮತ್ತು ಕುಟುಂಬಸ್ಥರು ಊರಿನಲ್ಲೇ ವಾಸವಾಗಿದ್ದರು.

9. ಅರ್ಥಾತ್- ಹಾರೂನರ ಸಂತತಿಯ ಪುತ್ರಿಯೇ! ಅರಬಿ ನಾಣ್ನುಡಿಯಲ್ಲಿ ಯಾವುದಾದರೂ ಗೋತ್ರಕ್ಕೆ ಸೇರಿದ ವ್ಯಕ್ತಿಯನ್ನು ಆ ಗೋತ್ರದ ಸಹೋದರ ಎನ್ನಲಾಗುತ್ತದೆ. ಅವರ ಜನಾಂಗದ ವ್ಯಕ್ತಿಗಳು ಹೀಗೆ ಹೇಳುವುದರ ಅರ್ಥ, “ನಮ್ಮ ಅತ್ಯಂತ ಶ್ರೇಷ್ಠವಾದ ಧಾರ್ಮಿಕ ಹಿನ್ನೆಲೆಯುಳ್ಳ ಮನೆತನದ ಮಹಿಳೆಯೇ! ನೀನು ಇದೆಂತಹ ಕೆಲಸ ಮಾಡಿದೆ?” ಎಂದಾಗಿತ್ತು.

ದಾಸ[10] ಅವನು ನನಗೆ ಗ್ರಂಥ ನೀಡಿದನು. ಪ್ರವಾದಿಯನ್ನಾಗಿ ಮಾಡಿದನು-	وَجَعَلَنِي نَبِيًّا ﴿٣٠﴾
31. ಮತ್ತು ನನ್ನನ್ನು ನಾನೆಲ್ಲಿದ್ದರೂ ಅನುಗ್ರಹೀತನಾಗಿರುವಂತೆ ಮಾಡಿದನು ಮತ್ತು ನನ್ನ ಬಾಳಿನುದ್ದಕ್ಕೂ ನಮಾಝ್ ಮತ್ತು ಝಕಾತ್ ಪಾಲಿಸುತ್ತಿರಲು ಆಜ್ಞೆಯಿತ್ತನು.	وَّجَعَلَنِي مُبٰرَكًا اَيْنَ مَا كُنْتُ ۖ وَ اَوْصٰنِي بِالصَّلٰوةِ وَالزَّكٰوةِ مَا دُمْتُ حَيًّا ﴿٣١﴾
32. ನನ್ನನ್ನು ನನ್ನ ಮಾತೆಯ ಋಣ ಸಂದಾಯ ಮಾಡುವವನಾಗಿಸಿದನು[11] ಮತ್ತು ನನ್ನನ್ನು ಅಹಂಕಾರಿಯನ್ನಾಗಿಯೂ ದುಷ್ಟನನ್ನಾಗಿಯೂ ಮಾಡಿರುವುದಿಲ್ಲ.	وَّبَرًّا بِوَالِدَتِي ۖ وَلَمْ يَجْعَلْنِي جَبَّارًا شَقِيًّا ﴿٣٢﴾
33. ನಾನು ಜನಿಸಿದಾಗಲೂ ಸಾಯುವಾಗಲೂ ಜೀವಂತಗೊಳಿಸಿ ಎಬ್ಬಿಸಲ್ಪಡುವಾಗಲೂ ನನ್ನ ಮೇಲೆ ಶಾಂತಿ ಇದೆ."[12]	وَالسَّلٰمُ عَلَيَّ يَوْمَ وُلِدْتُّ وَيَوْمَ اَمُوْتُ وَيَوْمَ اُبْعَثُ حَيًّا ﴿٣٣﴾
34. ಇವರೇ ಮರ್ಯಮರ ಪುತ್ರ ಈಸಾ. ಇವರ ಬಗ್ಗೆ ಜನರು ಸಂಶಯ ಪಡುತ್ತಿರುವುದರ ಸತ್ಯಾಂಶವಿದು.	ذٰلِكَ عِيْسَى ابْنُ مَرْيَمَ ۚ قَوْلَ الْحَقِّ الَّذِي فِيْهِ يَمْتَرُوْنَ ﴿٣٤﴾
35. ಯಾರನ್ನಾದರೂ ಮಗನಾಗಿ ಮಾಡಿಕೊಳ್ಳುವುದು ಅಲ್ಲಾಹನಿಗೆ ಭೂಷಣವಲ್ಲ. ಅವನು ಪರಿಶುದ್ಧನು. ಅವನು, ಏನಾದರೂ ಆಗಬೇಕೆಂದು ತೀರ್ಮಾನಿಸಿದರೆ 'ಆಗು' ಎಂದು ಬಿಡುತ್ತಾನೆ ಮತ್ತು ಅದು ಆಗಿಬಿಡುತ್ತದೆ.[13]	مَا كَانَ لِلّٰهِ اَنْ يَّتَّخِذَ مِنْ وَّلَدٍ ۙ سُبْحٰنَهٗ ۗ اِذَا قَضٰى اَمْرًا فَاِنَّمَا يَقُوْلُ لَهٗ كُنْ فَيَكُوْنُ ﴿٣٥﴾
36. (ಈಸಾ ಹೀಗೆ ಹೇಳಿದ್ದರು): "ನಿಶ್ಚಯವಾಗಿಯೂ ಅಲ್ಲಾಹನು ನನ್ನ	وَاِنَّ اللّٰهَ رَبِّي وَرَبُّكُمْ فَاعْبُدُوْهُ ۗ

10. ಇದಕ್ಕೆ ಮೊದಲು 21ನೆಯ ಸೂಕ್ತದಲ್ಲಿ ಪ್ರಸ್ತಾಪಿಸಲಾಗಿರುವ 'ನಿದರ್ಶನ' ಇದುವೇ ಆಗಿತ್ತು. ತೊಟ್ಟಿಲಲ್ಲಿ ಬಿದ್ದುಕೊಂಡಿದ್ದ ನವಜಾತ ಶಿಶು ಮಾತನಾಡಲಾರಂಭಿಸಿತು. ಆದರಿಂದ ಅದೊಂದು ಪಾಪದ ಪರಿಣಾಮವಲ್ಲ ಬದಲಾಗಿ ಅಲ್ಲಾಹನು ತೋರಿಸಿರುವ ಪವಾಡವಾಗಿದೆ ಎಂಬ ವಿಷಯ ಎಲ್ಲರಿಗೂ ಸ್ಪಷ್ಟವಾಯಿತು. ಆಲಿ ಇಮ್ರಾನ್ ಅಧ್ಯಾಯದ ಸೂಕ್ತ 46 ಮತ್ತು ಅಲ್ ಮಾಇದಃ ಅಧ್ಯಾಯದ ಸೂಕ್ತ 110ರಲ್ಲಿಯೂ ಹ. ಈಸಾ(ಅ) ತೊಟ್ಟಿಲಲ್ಲೇ ಮಾತನಾಡಿದರೆಂದು ಹೇಳಲಾಗಿದೆ.

11. ಇಲ್ಲಿ ತಂದೆ-ತಾಯಿಗಳ ಬಾಧ್ಯತೆಯನ್ನು ಈಡೇರಿಸುವವನು ಎನ್ನುವ ಬದಲು ತಾಯಿಯ ಬಾಧ್ಯತೆಯನ್ನು ಈಡೇರಿಸುವವನು ಎನ್ನಲಾಗಿದೆ. ಈಸಾರಿಗೆ(ಅ) ತಂದೆ ಇರಲಿಲ್ಲ ಎಂಬುದಕ್ಕೆ ಇದೂ ಒಂದು ಆಧಾರವಾಗಿದೆ. ಕುರ್‌ಆನಿನಲ್ಲಿ ಎಲ್ಲೆಡೆ ಅವರನ್ನು 'ಈಸಾ ಬಿನ್ ಮರ್ಯಮ್' ಎಂದು ಕರೆಯಲಾಗಿರುವುದೂ ಇದಕ್ಕಿರುವ ಒಂದು ಸ್ಪಷ್ಟ ಸಾಕ್ಷ್ಯವಾಗಿದೆ.

12. ಈ ದೃಷ್ಟಾಂತವನ್ನು ತೋರಿಸುವ ಮೂಲಕ ಅಲ್ಲಾಹನು ಆಗಲೇ ಬನೀಇಸ್ರಾಈಲರ ಮುಂದೆ ತನ್ನ ಹೊಣೆಯನ್ನು ಪೂರ್ತಿಗೊಳಿಸಿದ್ದನು. ಯೌವನಾವಸ್ಥೆಗೆ ತಲಪಿದ ನಂತರ ಹ. ಈಸಾ(ಅ) ಪ್ರವಾದಿತ್ವದ ಕೆಲಸ ಆರಂಭಿಸಿದಾಗ ಅವರ ಜನಾಂಗದವರು ಅವರನ್ನು ನಿರಾಕರಿಸಿದರು. ಮಾತ್ರವಲ್ಲ ಅವರಿಗೆ ಜೀವ ಬೆದರಿಕೆಯೊಡ್ಡಿದರು. ಅವರ ಮಾತೆಯ ಮೇಲೆ ವ್ಯಭಿಚಾರದ ಆರೋಪ ಹೊರಿಸಲೂ ಅವರು ಹೇಸಲಿಲ್ಲ. ಆದ್ದರಿಂದಲೇ ಅಲ್ಲಾಹನು ಯಾವ ಜನಾಂಗಕ್ಕೂ ನೀಡದೇ ಇದ್ದಂತಹ ಶಿಕ್ಷೆಯನ್ನು ಅವರಿಗೆ ನೀಡಿದನು.

13. ಇದು ಕ್ರೈಸ್ತರ ಮಟ್ಟಿಗೆ ಅಲ್ಲಾಹನು ತನ್ನ ಹೊಣೆಯನ್ನು ಪೂರ್ತಿಗೊಳಿಸಿರುವುದಾಗಿದೆ. ಪವಾಡ ಸದೃಶವಾಗಿ ಹುಟ್ಟುವುದು ಅವರನ್ನು ದೇವಪುತ್ರ (ಶಾಂತಂ ಪಾಪಂ) ಎಂದು ಭಾವಿಸಲು ಆಧಾರವಲ್ಲ.

ಪ್ರಭುವೂ ನಿಮ್ಮ ಪ್ರಭುವೂ ಆಗಿರುತ್ತಾನೆ. ಆದುದರಿಂದ ನೀವು ಅವನ ದಾಸ್ಯ-ಆರಾಧನೆಯನ್ನೇ ಮಾಡಿರಿ. ಇದುವೇ ನೇರ ಮಾರ್ಗ."

هٰذَا صِرَاطٌ مُّسْتَقِيمٌ ﴿٣٦﴾

37. ಆದರೆ ಆ ಬಳಿಕ ವಿವಿಧ ಪಂಗಡಗಳು ಪರಸ್ಪರ ಭಿನ್ನಾಭಿಪ್ರಾಯ ತಾಳಲಾರಂಭಿಸಿದುವು. ಆದುದರಿಂದ ಸತ್ಯನಿಷೇಧಿಗಳಿಗೆ ಅವರು ಕಾಣಲಿರುವ ಒಂದು ಮಹಾದಿನವು ವಿನಾಶ ಕಾಲವಾಗಿರುವುದು.

فَاخْتَلَفَ الْأَحْزَابُ مِن بَيْنِهِمْ ۖ فَوَيْلٌ لِّلَّذِينَ كَفَرُوا مِن مَّشْهَدِ يَوْمٍ عَظِيمٍ ﴿٣٧﴾

38. ಅವರು ನಮ್ಮ ಮುಂದೆ ಹಾಜರಾಗುವಂದು ಅವರ ಕಿವಿಗಳೂ ಚೆನ್ನಾಗಿ ಆಲಿಸುತ್ತಿರುವುವು ಮತ್ತು ಅವರ ಕಣ್ಣುಗಳೂ ಚೆನ್ನಾಗಿ ನೋಡುತ್ತಿರುವುವು. ಆದರೆ ಇಂದು ಈ ಅಕ್ರಮಿಗಳು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಬಿದ್ದಿರುತ್ತಾರೆ.

أَسْمِعْ بِهِمْ وَأَبْصِرْ يَوْمَ يَأْتُونَنَا ۖ لَٰكِنِ الظَّالِمُونَ الْيَوْمَ فِي ضَلَالٍ مُّبِينٍ ﴿٣٨﴾

39. ಓ ಪೈಗಂಬರರೇ, ಇವರು ಅಲಕ್ಷ್ಯರಾಗಿರುವ ಹಾಗೂ ವಿಶ್ವಾಸವಿರಿಸದಿರುವ ಈ ಸ್ಥಿತಿಯಲ್ಲಿ ತೀರ್ಪು ನೀಡಲಾಗುವ ಹಾಗೂ ವಿಷಾದಿಸುವ ಹೊರತು ಯಾವ ಅನ್ಯ ಮಾರ್ಗವೂ ಕಾಣದಿರುವಂತಹ ಆ ದಿನದ ಬಗ್ಗೆ ಇವರನ್ನು ಎಚ್ಚರಿಸಿರಿ.

وَأَنذِرْهُمْ يَوْمَ الْحَسْرَةِ إِذْ قُضِيَ الْأَمْرُ وَهُمْ فِي غَفْلَةٍ وَهُمْ لَا يُؤْمِنُونَ ﴿٣٩﴾ وقف لازم

40. ಕಟ್ಟಕಡೆಗೆ ಈ ಭೂಮಿ ಹಾಗೂ ಇದರಲ್ಲಿರುವ ಸಕಲ ವಸ್ತುಗಳ ಉತ್ತರಾಧಿಕಾರಿಗಳು ನಾವೇ ಆಗಿರುವೆವು ಮತ್ತು ಎಲ್ಲರೂ ನಮ್ಮ ಕಡೆಗೇ ಮರಳಿಸಲ್ಪಡುವರು.

إِنَّا نَحْنُ نَرِثُ الْأَرْضَ وَمَنْ عَلَيْهَا وَإِلَيْنَا يُرْجَعُونَ ﴿٤٠﴾ ع

41. ಈ ಗ್ರಂಥದಲ್ಲಿ ಇಬ್‌ರಾಹೀಮರ ಬಗ್ಗೆ ಪ್ರಸ್ತಾಪಿಸಿರಿ. ನಿಶ್ಚಯವಾಗಿಯೂ ಅವರೊಬ್ಬ ಸತ್ಯ ಸಂಧರೂ ಪ್ರವಾದಿಯೂ ಆಗಿದ್ದರು.

وَاذْكُرْ فِي الْكِتَابِ إِبْرَاهِيمَ ۚ إِنَّهُ كَانَ صِدِّيقًا نَّبِيًّا ﴿٤١﴾

42. ಅವರು ತಮ್ಮ ತಂದೆಯೊಡನೆ, "ಅಪ್ಪಾ, ಆಲಿಸಲಾಗದ, ನೋಡಲಾಗದ ಮತ್ತು ತಮ್ಮ ಯಾವ ಕೆಲಸಕ್ಕೂ ಬಾರದ ವಸ್ತುಗಳನ್ನು ತಾವೇಕೆ ಆರಾಧಿಸುತ್ತೀರಿ?

إِذْ قَالَ لِأَبِيهِ يَا أَبَتِ لِمَ تَعْبُدُ مَا لَا يَسْمَعُ وَلَا يُبْصِرُ وَلَا يُغْنِي عَنكَ شَيْئًا ﴿٤٢﴾

43. ಅಪ್ಪಾ, ತಮಗೆ ಬಂದಿರದ ಜ್ಞಾನವೊಂದು ನನಗೆ ಬಂದಿವೆ. ತಾವು ನನ್ನನ್ನು ಅನುಸರಿಸಿರಿ. ನಾನು ತಮಗೆ ನೇರ ಮಾರ್ಗವನ್ನು ತೋರಿಸುವೆನು.

يَا أَبَتِ إِنِّي قَدْ جَاءَنِي مِنَ الْعِلْمِ مَا لَمْ يَأْتِكَ فَاتَّبِعْنِي أَهْدِكَ صِرَاطًا سَوِيًّا ﴿٤٣﴾

44. ಅಪ್ಪಾ, ತಾವು ಶೈತಾನನ ದಾಸ್ಯ-ಆರಾಧನೆ ಮಾಡಬೇಡಿರಿ. ಶೈತಾನನು ರಹ್ಮಾನನ (ಕರುಣಾ ನಿಧಿಯ) ಆಜ್ಞೋಲ್ಲಂಘಕನು.

يَا أَبَتِ لَا تَعْبُدِ الشَّيْطَانَ ۖ إِنَّ الشَّيْطَانَ كَانَ لِلرَّحْمَٰنِ عَصِيًّا ﴿٤٤﴾

45. ಅಪ್ಪಾ, ತಾವು ರಹ್ಮಾನನ ಶಿಕ್ಷೆಗೆ ಗುರಿಯಾಗಿ ಬಿಡುವಿರಿ ಹಾಗೂ ಶೈತಾನನ ಸಂಗಾತಿಯಾಗಿ ಬಿಡುವಿರಿ ಎಂಬ ಭಯ ನನಗಿದೆ" ಎಂದು ಹೇಳಿದರು.

يَٰٓأَبَتِ إِنِّيٓ أَخَافُ أَن يَمَسَّكَ عَذَابٞ مِّنَ ٱلرَّحۡمَٰنِ فَتَكُونَ لِلشَّيۡطَٰنِ وَلِيّٗا ٤٥

46. (ಈ ಸಂದರ್ಭವನ್ನೂ ಇವರಿಗೆ ನೆನಪಿಸಿರಿ) ಆಗ ತಂದೆಯು, "ಇಬ್‌ರಾಹೀಮ್, ನೀನೇನು ನನ್ನ ಆರಾಧ್ಯರಿಂದ ವಿಮುಖನಾದೆಯಾ? ನೀನು (ಈ ನೀತಿಯನ್ನು) ಕೈ ಬಿಡದಿದ್ದರೆ ನಾನು ನಿನ್ನನ್ನು ಕಲ್ಲೆಸೆದು ಕೊಂದು ಹಾಕುವೆನು. ನೀನು ನನ್ನಿಂದ ಶಾಶ್ವತವಾಗಿ ತೊಲಗಿಬಿಡು" ಎಂದನು.

قَالَ أَرَاغِبٌ أَنتَ عَنۡ ءَالِهَتِي يَٰٓإِبۡرَٰهِيمُۖ لَئِن لَّمۡ تَنتَهِ لَأَرۡجُمَنَّكَۖ وَٱهۡجُرۡنِي مَلِيّٗا ٤٦

47. ಆಗ ಇಬ್‌ರಾಹೀಮರು, "ತಮಗೆ ಸಲಾಮ್, ತಮ್ಮನ್ನು ಕ್ಷಮಿಸಲಿಕ್ಕಾಗಿ ನಾನು ನನ್ನ ಪ್ರಭುವಿನೊಡನೆ ಪ್ರಾರ್ಥಿಸುವೆನು. ನನ್ನ ಪ್ರಭು ನನ್ನ ಮೇಲೆ ಅತ್ಯಧಿಕ ಕೃಪೆಯುಳ್ಳವನು.

قَالَ سَلَٰمٌ عَلَيۡكَۖ سَأَسۡتَغۡفِرُ لَكَ رَبِّيٓۖ إِنَّهُۥ كَانَ بِي حَفِيّٗا ٤٧

48. ನಾನು ತಮ್ಮನ್ನೂ ತಾವೆಲ್ಲರೂ ಅಲ್ಲಾಹನನ್ನು ಬಿಟ್ಟು ಕೂಗಿ ಪ್ರಾರ್ಥಿಸುತ್ತಿರುವವುಗಳನ್ನೂ ಬಿಟ್ಟಗಲಿ ಹೋಗುತ್ತೇನೆ. ನಾನಂತೂ ನನ್ನ ಪ್ರಭುವನ್ನು ಮಾತ್ರ ಪ್ರಾರ್ಥಿಸುವೆನು. ನಾನು ನನ್ನ ಪ್ರಭುವನ್ನು ಪ್ರಾರ್ಥಿಸಿ ನಿರಾಶನಾಗಲಾರೆ ಎಂದು ನನಗೆ ಭರವಸೆಯಿದೆ" ಎಂದರು.

وَأَعۡتَزِلُكُمۡ وَمَا تَدۡعُونَ مِن دُونِ ٱللَّهِ وَأَدۡعُواْ رَبِّي عَسَىٰٓ أَلَّآ أَكُونَ بِدُعَآءِ رَبِّي شَقِيّٗا ٤٨

49. ಆ ಪ್ರಕಾರ ಅವರು (ಇಬ್‌ರಾಹೀಮರು) ಅವರನ್ನೂ ಅವರ ದೇವೇತರ ಆರಾಧ್ಯರನ್ನೂ ಬಿಟ್ಟಗಲಿದಾಗ ನಾವು ಅವರಿಗೆ ಇಸ್‌ಹಾಕ್ ಮತ್ತು ಯಅ್‌ಕೂಬರಂತಹ ಸಂತತಿಯನ್ನು ಪ್ರದಾನ ಮಾಡಿದೆವು ಮತ್ತು ಪ್ರತಿಯೊಬ್ಬನನ್ನೂ ಪ್ರವಾದಿಯನ್ನಾಗಿ ಮಾಡಿದೆವು.

فَلَمَّا ٱعۡتَزَلَهُمۡ وَمَا يَعۡبُدُونَ مِن دُونِ ٱللَّهِ وَهَبۡنَا لَهُۥٓ إِسۡحَٰقَ وَيَعۡقُوبَۖ وَكُلّٗا جَعَلۡنَا نَبِيّٗا ٤٩

50. ಅವರಿಗೆ ನಮ್ಮ ಕರುಣೆಯನ್ನೂ ಪ್ರದಾನ ಮಾಡಿದೆವು ಮತ್ತು ನಿಜವಾದ ಖ್ಯಾತಿಯನ್ನು ನೀಡಿದೆವು.

وَوَهَبۡنَا لَهُم مِّن رَّحۡمَتِنَا وَجَعَلۡنَا لَهُمۡ لِسَانَ صِدۡقٍ عَلِيّٗا ٥٠

51. ಈ ಗ್ರಂಥದಲ್ಲಿ ಮೂಸಾರ ಕುರಿತು ಪ್ರಸ್ತಾಪಿಸಿರಿ. ಅವರೊಬ್ಬ ಆಯ್ದ ವ್ಯಕ್ತಿಯಾಗಿದ್ದರು ಮತ್ತು ರಸೂಲ್ (ಸಂದೇಶವಾಹಕ) ಹಾಗೂ ನಬೀ[14] (ಪ್ರವಾದಿ) ಆಗಿದ್ದರು.

وَٱذۡكُرۡ فِي ٱلۡكِتَٰبِ مُوسَىٰٓۚ إِنَّهُۥ كَانَ مُخۡلَصٗا وَكَانَ رَسُولٗا نَّبِيّٗا ٥١

14. 'ರಸೂಲ್' ಎಂದರೆ ಸಂದೇಶವಾಹಕ, ಕಳುಹಿಸಲ್ಪಟ್ಟವ. 'ನಬಿ' ಎಂಬ ಪದದ ಬಗ್ಗೆ ನಿಘಂಟುಕಾರರಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವರ ಪ್ರಕಾರ 'ನಬಿ' ಎಂದರೆ ಸುದ್ದಿ ತಲಪಿಸುವವನು. ಇನ್ನು ಕೆಲವರ ಪ್ರಕಾರ 'ನಬಿ' ಎಂದರೆ 'ಉನ್ನತ ಪದವಿ' ಮತ್ತು 'ಉಚ್ಚಸ್ಥಾನದಲ್ಲಿರುವವನು.' ಆದ್ದರಿಂದ ಯಾರನ್ನಾದರೂ 'ರಸೂಲ್-ನಬಿ' ಎಂದು ಹೇಳಿದರೆ ಅದರ ಅರ್ಥ 'ಉನ್ನತ ಸ್ಥಾನದಲ್ಲಿರುವ ಸಂದೇಶವಾಹಕ' ಅಥವಾ

52. ನಾವು ಅವರನ್ನು 'ತೂರ್' (ಪರ್ವತದ) ಬಲಗಡೆಯಿಂದ ಕರೆದೆವು. ರಹಸ್ಯ ಸಂಭಾಷಣೆಯ ಮೂಲಕ ಅವರಿಗೆ ಸಾಮಿಪ್ಯ ಪ್ರದಾನ ಮಾಡಿದೆವು.

وَنَادَيْنٰهُ مِنْ جَانِبِ الطُّوْرِ الْاَيْمَنِ وَقَرَّبْنٰهُ نَجِيًّا ﴿٥٢﴾

53. ಮತ್ತು ನಮ್ಮ ಕೃಪೆಯಿಂದ ಅವರ ಸಹೋದರ ಹಾರೂನರನ್ನು ಪ್ರವಾದಿಯಾಗಿ ಮಾಡಿ ಅವರಿಗೆ (ಸಹಾಯಕನನ್ನಾಗಿ ಮಾಡಿ) ಕೊಟ್ಟೆವು.

وَوَهَبْنَا لَهٗ مِنْ رَّحْمَتِنَاۤ اَخَاهُ هٰرُوْنَ نَبِيًّا ﴿٥٣﴾

54. ಈ ಗ್ರಂಥದಲ್ಲಿ ಇಸ್ಮಾಈಲರ ಕುರಿತು ಪ್ರಸ್ತಾಪಿಸಿರಿ. ಅವರು ವಚನಪಾಲಕರಾಗಿದ್ದರು ಮತ್ತು ಸಂದೇಶವಾಹಕ ಹಾಗೂ ಪ್ರವಾದಿ ಆಗಿದ್ದರು.

وَاذْكُرْ فِى الْكِتٰبِ اِسْمٰعِيْلَ ۚ اِنَّهٗ كَانَ صَادِقَ الْوَعْدِ وَكَانَ رَسُوْلًا نَّبِيًّا ۚ﴿٥٤﴾

55. ಅವರು ತನ್ನ ಮನೆಯವರಿಗೆ ನಮಾಝ್ ಮತ್ತು ಝಕಾತ್‌ನ ಅಪ್ಪಣೆ ಕೊಡುತ್ತಿದ್ದರು ಮತ್ತು ತನ್ನ ಪ್ರಭುವಿನ ಬಳಿ ಓರ್ವ ಪ್ರೀತಿಪಾತ್ರ ವ್ಯಕ್ತಿಯಾಗಿದ್ದರು.

وَكَانَ يَاْمُرُ اَهْلَهٗ بِالصَّلٰوةِ وَالزَّكٰوةِ ۠ وَكَانَ عِنْدَ رَبِّهٖ مَرْضِيًّا ﴿٥٥﴾

56. ಈ ಗ್ರಂಥದಲ್ಲಿ ಇದ್‌ರೀಸರ ಕುರಿತು ಪ್ರಸ್ತಾಪಿಸಿರಿ. ಅವರೊಬ್ಬ ಸತ್ಯಸಂಧ ಹಾಗೂ ಓರ್ವ ಪ್ರವಾದಿಯಾಗಿದ್ದರು.

وَاذْكُرْ فِى الْكِتٰبِ اِدْرِيْسَ ۚ اِنَّهٗ كَانَ صِدِّيْقًا نَّبِيًّا ۙ﴿٥٦﴾

57. ನಾವು ಅವರನ್ನು ಉನ್ನತ ಸ್ಥಾನಕ್ಕೆ ಏರಿಸಿದ್ದೆವು.

وَّرَفَعْنٰهُ مَكَانًا عَلِيًّا ﴿٥٧﴾

58. ಈ ಪ್ರವಾದಿಗಳು ಅಲ್ಲಾಹನು ಅನುಗ್ರಹಿಸಿದವರಾಗಿದ್ದು, ಆದಮರ ಸಂತತಿಯಿಂದಲೂ ನಾವು ನೂಹರೊಂದಿಗೆ ನಾವೆಯಲ್ಲಿ

اُولٰٓئِكَ الَّذِيْنَ اَنْعَمَ اللّٰهُ عَلَيْهِمْ مِّنَ النَّبِيّٖنَ مِنْ ذُرِّيَّةِ اٰدَمَ ۗ وَمِمَّنْ

'ಅಲ್ಲಾಹನ ವತಿಯಿಂದ ಸುದ್ದಿ ತಲಪಿಸುವ ಸಂದೇಶವಾಹಕ' ಎಂದಾಗುತ್ತದೆ. ಪವಿತ್ರ ಕುರ್‌ಆನಿನಲ್ಲಿ ಈ ಎರಡೂ ಪದಗಳು ಸಾಮಾನ್ಯವಾಗಿ ಸಮಾನಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿವೆ. ಆದರೆ ಕೆಲವು ಕಡೆಗಳಲ್ಲಿ ಅದರ ಪ್ರಯೋಗವನ್ನು ಗಮನಿಸಿದರೆ ಆ ಎರಡು ಪದವಿಗಳಲ್ಲಿ ಸ್ಥಾನ ಮತ್ತು ಕಾರ್ಯದ ಸ್ವರೂಪಕ್ಕೆ ಸಂಬಂಧಿಸಿದಂತೆ ಪಾರಿಭಾಷಿಕ ವ್ಯತ್ಯಾಸವಿದೆ ಎಂದು ವ್ಯಕ್ತವಾಗುತ್ತದೆ. ಉದಾ: ಅಲ್ ಹಜ್ಜ್ ಅಧ್ಯಾಯದ 52ನೆಯ ಸೂಕ್ತದಲ್ಲಿ ಹೀಗೆನ್ನಲಾಗಿದೆ, "ನಾವು ನಿಮಗಿಂತ ಮೊದಲು ಬೇರಾವುದೇ ಕಾರ್ಯಕ್ಕಾಗಿ ರಸೂಲರನ್ನಾಗಲಿ, ನಬಿಯನ್ನಾಗಲಿ ಕಳುಹಿಸಿಲ್ಲ. ಆದರೆ....." 'ರಸೂಲ್' ಮತ್ತು 'ನಬಿ' ಬೇರೆ ಬೇರೆ ಪದಗಳು ಮತ್ತು ಅವುಗಳ ನಡುವೆ ನಿಶ್ಚಿತವಾದ ಪಾರಿಭಾಷಿಕ ವ್ಯತ್ಯಾಸವಿದೆ ಎಂದು ಇದರಿಂದ ವ್ಯಕ್ತವಾಗುತ್ತದೆ. ಆದ್ದರಿಂದ ಈ ವ್ಯತ್ಯಾಸದ ಸ್ವರೂಪವೇನು ಎಂಬ ಬಗ್ಗೆ ವ್ಯಾಖ್ಯಾನಕಾರರಲ್ಲಿ ಚರ್ಚೆ ಮುಂದುವರಿದಿದೆ. ಆದರೆ ನಿಖರವಾದ ಆಧಾರಪ್ರಮಾಣಗಳ ಮೂಲಕ ಯಾರೂ 'ರಸೂಲ್' ಮತ್ತು 'ನಬಿ'ಗಳ ವಿಭಿನ್ನ ಸ್ಥಾನಮಾನಗಳನ್ನು ಗೊತ್ತುಪಡಿಸಲಿಲ್ಲ ಎಂಬುದು ಒಂದು ವಾಸ್ತವಿಕತೆಯಾಗಿದೆ. ಹೆಚ್ಚೆಂದರೆ 'ರಸೂಲ್' ಎಂಬ ಪದ 'ನಬಿ' ಎಂಬ ಪದಕ್ಕಿಂತ ವಿಶಿಷ್ಟವಾದುದು ಎಂದು ಹೇಳಬಹುದಾಗಿದೆ. ಅರ್ಥಾತ್ ಪ್ರತಿಯೊಬ್ಬ ರಸೂಲರೂ 'ನಬಿ'ಯಾಗಿರುತ್ತಾರೆ. ಆದರೆ ಪ್ರತಿಯೊಬ್ಬ 'ನಬಿ' ರಸೂಲ್ ಆಗಲು ಸಾಧ್ಯವಿಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಪ್ರವಾದಿಗಳ ಪೈಕಿ ಸಾಮಾನ್ಯ ಪ್ರವಾದಿಗಳಿಗಿಂತ ಪ್ರಾಮುಖ್ಯವಿರುವ ಪದವಿಯಲ್ಲಿ ನೇಮಿಸಲ್ಪಟ್ಟ ಗೌರವಾನ್ವಿತ ವ್ಯಕ್ತಿಗಳನ್ನು 'ರಸೂಲ್' ಎಂದು ಕರೆಯಲಾಗಿದೆ. ಪ್ರವಾದಿ ವಚನವೊಂದರ ಮೂಲಕವೂ ಇದಕ್ಕೆ ಪುಷ್ಟಿ ದೊರೆಯುತ್ತದೆ. ಪ್ರವಾದಿವರ್ಯರೊಡನೆ(ಸ) 'ರಸೂಲ್'ರ ಸಂಖ್ಯೆ ಕೇಳಲಾದಾಗ ಅವರು 313 ಅಥವಾ 315 ಎಂದು ಹೇಳಿದರು. 'ನಬೀ'ಗಳ ಸಂಖ್ಯೆಯ ಬಗ್ಗೆ ಕೇಳಲಾದಾಗ ಅವರು ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರವೆಂದು ಹೇಳಿದರು.

حَمَلْنَا مَعَ نُوحٍ ۫ وَّ مِنْ ذُرِّيَّةِ إِبْرٰهِيمَ
وَإِسْرَآءِيلَ ۫ وَمِمَّنْ هَدَيْنَا وَاجْتَبَيْنَا ۚ
إِذَا تُتْلٰى عَلَيْهِمْ اٰيٰتُ الرَّحْمٰنِ خَرُّوْا
سُجَّدًا وَّ بُكِيًّا ۩ ﴿٥٨﴾

السجدة

ಏರಿಸಿದ್ದವರ ಸಂತತಿಯಿಂದಲೂ ಇಬ್‌ರಾಹೀಮರ ಸಂತತಿ ಯಿಂದಲೂ ಇಸ್ರಾಈಲರ ಸಂತತಿಯಿಂದಲೂ ಆಗಿದ್ದರು ಮತ್ತು ನಾವು ಸನ್ಮಾರ್ಗ ದರ್ಶನ ಮಾಡಿ ಪುನೀತರನ್ನಾಗಿಸಿದವರಲ್ಲೂ ಇವರಾಗಿದ್ದರು. ಇವರಿಗೆ ರಹ್ಮಾನನ ವಚನಗಳನ್ನು ಓದಿ ಹೇಳಿದಾಗ ಇವರು ಅಳುತ್ತಾ ಸಾಷ್ಟಾಂಗವೆರಗುತ್ತಿದ್ದರು.

فَخَلَفَ مِنْ بَعْدِهِمْ خَلْفٌ اَضَاعُوا
الصَّلٰوةَ وَاتَّبَعُوا الشَّهَوٰتِ فَسَوْفَ
يَلْقَوْنَ غَيًّا ۙ ﴿٥٩﴾

59. ಅವರ ಬಳಿಕ ಅಯೋಗ್ಯರಾದವರು ಅವರ ಉತ್ತರಾಧಿಕಾರಿ ಗಳಾದರು. ಅವರು ನಮಾಝನ್ನು ವ್ಯರ್ಥಗೊಳಿಸಿದರು ಮತ್ತು ದೇಹೇಚ್ಛೆಗಳನ್ನು ಅನುಸರಿಸಿದರು. ಆದುದರಿಂದ ಶೀಘ್ರದಲ್ಲೇ ಅವರು ಪಥಭ್ರಷ್ಟತೆಯ ಪರಿಣಾಮವನ್ನು ಅನುಭವಿಸಲಿರುವರು.

اِلَّا مَنْ تَابَ وَ اٰمَنَ وَعَمِلَ صَالِحًا
فَاُولٰٓئِكَ يَدْخُلُوْنَ الْجَنَّةَ وَلَا
يُظْلَمُوْنَ شَيْـًٔا ۙ ﴿٦٠﴾

60. ಆದರೆ ಪಶ್ಚಾತ್ತಾಪ ಪಟ್ಟವರೂ ಸತ್ಯವಿಶ್ವಾಸ ಸ್ವೀಕರಿಸಿಕೊಂಡವರೂ ಸತ್ಕರ್ಮ ಕೈಗೊಂಡವರೂ ಸ್ವರ್ಗದಲ್ಲಿ ಪ್ರವೇಶ ಪಡೆಯುವರು ಮತ್ತು ಅವರ ಹಕ್ಕುಚ್ಯುತಿ ಕಿಂಚಿತ್ತೂ ಆಗದು.

جَنّٰتِ عَدْنِ ِالَّتِيْ وَعَدَ الرَّحْمٰنُ عِبَادَهٗ
بِالْغَيْبِ ۗ اِنَّهٗ كَانَ وَعْدُهٗ مَاْتِيًّا ﴿٦١﴾

61. ಅವರಿಗಾಗಿ ರಹ್ಮಾನನು ತನ್ನ ದಾಸರಿಗೆ ಪರೋಕ್ಷ ವಾಗ್ದಾನ ವಿತ್ತಿರುವ ಶಾಶ್ವತವಾದ ಸ್ವರ್ಗೋದ್ಯಾನಗಳಿವೆ ಮತ್ತು ನಿಶ್ಚಯ ವಾಗಿಯೂ ಈ ವಾಗ್ದಾನ ಪೂರ್ಣಗೊಂಡೇ ತೀರುವುದು.

لَا يَسْمَعُوْنَ فِيْهَا لَغْوًا اِلَّا سَلٰمًا ۗ وَلَهُمْ
رِزْقُهُمْ فِيْهَا بُكْرَةً وَّعَشِيًّا ﴿٦٢﴾

62. ಅಲ್ಲಿ ಅವರು ಯಾವುದೇ ಅಸಭ್ಯ ಮಾತುಗಳನ್ನು ಆಲಿಸಲಾರರು. ಅವರು ಉತ್ತಮವಾದುದನ್ನೇ ಆಲಿಸುವರು. ಅವರಿಗೆ ಅವರ ಆಹಾರವೂ ಬೆಳಗುಬೈಗುಗಳಲ್ಲಿ ನಿರಂತರ ಸಿಗುತ್ತಲೇ ಇರುವುದು.

تِلْكَ الْجَنَّةُ الَّتِيْ نُوْرِثُ مِنْ عِبَادِنَا
مَنْ كَانَ تَقِيًّا ﴿٦٣﴾

63. ಇದುವೇ ಆ ಸ್ವರ್ಗ. ನಾವು ನಮ್ಮ ದಾಸರಲ್ಲಿ ಧರ್ಮನಿಷ್ಠ ರಾಗಿದ್ದವನನ್ನು ಅದರ ವಾರೀಸುದಾರನನ್ನಾಗಿ ಮಾಡುವೆವು.

وَمَا نَتَنَزَّلُ اِلَّا بِاَمْرِ رَبِّكَ ۚ لَهٗ مَا
بَيْنَ اَيْدِيْنَا وَمَا خَلْفَنَا وَمَا بَيْنَ
ذٰلِكَ ۚ وَمَا كَانَ رَبُّكَ نَسِيًّا ۚ ﴿٦٤﴾

64. (ಓ ಪೈಗಂಬರರೇ) ನಾವು ನಿಮ್ಮ ಪ್ರಭುವಿನ ಅಪ್ಪಣೆ ಇಲ್ಲದೆ ಇಳಿದು ಬರುವುದಿಲ್ಲ.[15] ನಮ್ಮ ಮುಂದೆ, ನಮ್ಮ ಹಿಂದೆ ಮತ್ತು ಅವುಗಳ ನಡುವೆ ಏನೆಲ್ಲ ಇರುವುದೋ ಅವೆಲ್ಲವುಗಳ ಮಾಲಕನು ಅವನೇ ಮತ್ತು ನಿಮ್ಮ ಪ್ರಭು ಮರೆತು ಬಿಡುವವನಲ್ಲ.

رَبُّ السَّمٰوٰتِ وَالْاَرْضِ وَمَا بَيْنَهُمَا
فَاعْبُدْهُ وَاصْطَبِرْ لِعِبَادَتِهٖ ۗ هَلْ تَعْلَمُ

65. ಅವನು ಆಕಾಶಗಳ, ಭೂಮಿಯ ಮತ್ತು ಅವುಗಳ ನಡುವೆಯಿರುವ ಸರ್ವಸ್ವಗಳ ಪಾಲಕ ಪ್ರಭು. ಆದುದರಿಂದ ನೀವು ಅವನ ದಾಸ್ಯ-

15. ಇದು ಅಲ್ಲಾಹನ ವಚನವಾದರೂ ಇಲ್ಲಿ ಮಾತನಾಡುತ್ತಿರುವವರು ದೇವಚರರಾಗಿದ್ದಾರೆ. ಅರ್ಥಾತ್ ನಾವು ನಮ್ಮಿಚ್ಛೆಯಂತೆ ಬರುವುದಿಲ್ಲ, ಬದಲಾಗಿ ಅಲ್ಲಾಹನು ಕಳುಹಿಸುವಾಗ ಆಗಮಿಸುತ್ತೇವೆ ಎಂದು ದೇವಚರರು ಪ್ರವಾದಿವರ್ಯರೊಂದಿಗೆ(ಸ) ಹೇಳುತ್ತಿದ್ದಾರೆ.

ಆರಾಧನೆ ಮಾಡಿರಿ ಮತ್ತು ಅವನ ದಾಸ್ಯ-ಆರಾಧನೆಯಲ್ಲೇ ಸ್ಥಿರವಾಗಿರಿ. ನಿಮ್ಮ ತಿಳುವಳಿಕೆಯಲ್ಲಿ ಅವನಿಗೆ ಸರಿಸಮಾನನಾದವನು ಯಾರಾದರೂ ಇದ್ದಾನೆಯೇ?

لَهُۥ سَمِيًّا ۝٦٥

66. "ನಾನು ಸತ್ತು ಹೋದ ಮೇಲೆ ನಿಜಕ್ಕೂ ಜೀವಂತಗೊಳಿಸಿ ತರಲ್ಪಡುವೆನೇ?" ಎಂದು ಮಾನವನು ಪ್ರಶ್ನಿಸುತ್ತಾನೆ.

وَيَقُولُ ٱلْإِنسَٰنُ أَءِذَا مَا مِتُّ لَسَوْفَ أُخْرَجُ حَيًّا ۝٦٦

67. ಮಾನವನು ಮೊದಲು ಏನೂ ಆಗಿಲ್ಲದಿದ್ದಾಗ ನಾವು ಅವನನ್ನು ಸೃಷ್ಟಿಸಿದ್ದುದು ಅವನಿಗೆ ನೆನಪಾಗುವುದಿಲ್ಲವೇ?

أَوَلَا يَذْكُرُ ٱلْإِنسَٰنُ أَنَّا خَلَقْنَٰهُ مِن قَبْلُ وَلَمْ يَكُ شَيْـًٔا ۝٦٧

68. ನಿಮ್ಮ ಪ್ರಭುವಿನಾಣೆ ನಾವು ಇವರೆಲ್ಲರನ್ನೂ ಇವರ ಸಂಗಡ ಶೈತಾನರನ್ನೂ ಖಂಡಿತವಾಗಿಯೂ ಸುತ್ತುಗಟ್ಟಿ ಆ ಬಳಿಕ ನರಕದ ಸುತ್ತಲೂ ತಂದು ಇವರನ್ನು ಮುಗ್ಗರಿಸಿ ಬೀಳಿಸುವೆವು.

فَوَرَبِّكَ لَنَحْشُرَنَّهُمْ وَٱلشَّيَٰطِينَ ثُمَّ لَنُحْضِرَنَّهُمْ حَوْلَ جَهَنَّمَ جِثِيًّا ۝٦٨

69. ಅನಂತರ ಎಲ್ಲ ಗುಂಪುಗಳಿಂದಲೂ ರಹ್ಮಾನನ ವಿರುದ್ಧ ಹೆಚ್ಚು ಉದ್ಧಟನಾಗಿದ್ದ ಪ್ರತಿಯೊಬ್ಬನನ್ನೂ ಹೆಕ್ಕಿ ತೆಗೆಯುವೆವು-

ثُمَّ لَنَنزِعَنَّ مِن كُلِّ شِيعَةٍ أَيُّهُمْ أَشَدُّ عَلَى ٱلرَّحْمَٰنِ عِتِيًّا ۝٦٩

70. ಇವರ ಪೈಕಿ ನರಕದಲ್ಲಿ ತಳ್ಳಲ್ಪಡಲು ಅತಿ ಹೆಚ್ಚು ಅರ್ಹರು ಯಾರೆಂಬುದನ್ನೂ ನಾವು ತಿಳಿದಿದ್ದೇವೆ.

ثُمَّ لَنَحْنُ أَعْلَمُ بِٱلَّذِينَ هُمْ أَوْلَىٰ بِهَا صِلِيًّا ۝٧٠

71. ನಿಮ್ಮ ಪೈಕಿ ನರಕವನ್ನು ಹಾದು ಹೋಗದವರು ಯಾರೂ ಇರಲಾರರು. ಇದೊಂದು ನಿರ್ಧರಿತ ವಿಷಯವಾಗಿದ್ದು ಇದನ್ನು ಪೂರ್ಣಗೊಳಿಸುವುದು ನಿಮ್ಮ ಪ್ರಭುವಿನ ಬಾಧ್ಯತೆಯಾಗಿದೆ.

وَإِن مِّنكُمْ إِلَّا وَارِدُهَا ۚ كَانَ عَلَىٰ رَبِّكَ حَتْمًا مَّقْضِيًّا ۝٧١

72. ಆ ಬಳಿಕ ನಾವು (ಭೂಲೋಕದಲ್ಲಿ) ಧರ್ಮನಿಷ್ಠರಾಗಿದ್ದವರನ್ನು ರಕ್ಷಿಸಿಕೊಳ್ಳುವೆವು ಮತ್ತು ಅಕ್ರಮಿಗಳನ್ನು ಅಲ್ಲೇ ಬಿದ್ದಿರಲು ಬಿಟ್ಟು ಬಿಡುವೆವು.

ثُمَّ نُنَجِّى ٱلَّذِينَ ٱتَّقَوا۟ وَّنَذَرُ ٱلظَّٰلِمِينَ فِيهَا جِثِيًّا ۝٧٢

73. ಇವರಿಗೆ ನಮ್ಮ ಸುವ್ಯಕ್ತ ವಚನಗಳನ್ನು ಓದಿ ಹೇಳಿದಾಗ ಸತ್ಯ ನಿಷೇಧಿಗಳು ಸತ್ಯವಿಶ್ವಾಸಿಗಳೊಡನೆ, "ನಮ್ಮೊ ಎರಡು ಪಂಗಡಗಳ ಪೈಕಿ ಯಾರು ಉತ್ತಮ ಸ್ಥಿತಿಯಲ್ಲಿದ್ದಾರೆ ಮತ್ತು ಯಾರ ಕೂಟಗಳು ಹೆಚ್ಚು ಶೋಭಾಯಮಾನವಾಗಿವೆ?" ಎಂದು ಕೇಳುತ್ತಾರೆ.[16]

وَإِذَا تُتْلَىٰ عَلَيْهِمْ ءَايَٰتُنَا بَيِّنَٰتٍ قَالَ ٱلَّذِينَ كَفَرُوا۟ لِلَّذِينَ ءَامَنُوٓا۟ أَىُّ ٱلْفَرِيقَيْنِ خَيْرٌ مَّقَامًا وَأَحْسَنُ نَدِيًّا ۝٧٣

16. ಮಕ್ಕಾದ ಸತ್ಯನಿಷೇಧಿಗಳು ಹೇಗೆ ವಾದಿಸುತ್ತಿದ್ದರೆಂದರೆ, ನೋಡಿ! ಲೋಕದಲ್ಲಿ ಯಾರಿಗೆ ಅಲ್ಲಾಹನ ಅನುಗ್ರಹ ಪ್ರಾಪ್ತವಾಗುತ್ತಿದೆ? ಯಾರ ಮನೆಗಳು ಹೆಚ್ಚು ಭವ್ಯವಾಗಿವೆ? ಯಾರ ಜೀವನ ಮಟ್ಟ ಉನ್ನತವಾಗಿದೆ? ಯಾರ ಸಭೆ ಸಮಾರಂಭಗಳು ವರ್ಣರಂಜಿತವಾಗಿರುತ್ತವೆ? ಇದೆಲ್ಲವೂ ನಮಗೆ ಪ್ರಾಪ್ತವಿದೆ. ಮುಸ್ಲಿಮರಾದ ನೀವು ಅದರಿಂದ ವಂಚಿತರಾಗಿದ್ದೀರಿ. ಹಾಗಾದರೆ ನೀವೇ ಯೋಚಿಸಿ. ನಾವು ಮಿಥ್ಯಮಾರ್ಗದಲ್ಲಿದ್ದು ಹೀಗೆ ಮೋಜಿನಿಂದಿರಲು ಮತ್ತು ನೀವು ಸನ್ಮಾರ್ಗದಲ್ಲಿದ್ದು ಕಷ್ಟ ಮತ್ತು ಬಡತನದಲ್ಲಿರಲು ಹೇಗೆ ಸಾಧ್ಯ?

74. ವಸ್ತುತಃ ನಾವು ಇವರಿಗಿಂತ ಮುಂಚೆ ಇವರಿಗಿಂತಲೂ ಅಧಿಕ ಸಾಧನಾನುಕೂಲತೆಗಳನ್ನು ಹೊಂದಿದ್ದ ಹಾಗೂ ತೋರಿಕೆಯ ಸುಖಾಡಂಬರಗಳಲ್ಲಿ ಇವರಿಗಿಂತಲೂ ಮಿಗಿಲಾಗಿದ್ದ ಎಷ್ಟೋ ಜನಾಂಗಗಳನ್ನು ನಾಶಗೊಳಿಸಿ ಬಿಟ್ಟಿರುತ್ತೇವೆ.

وَكَمْ أَهْلَكْنَا قَبْلَهُم مِّن قَرْنٍ هُمْ
أَحْسَنُ أَثَاثًا وَرِءْيًا ﴿٧٤﴾

75. ಇವರೊಡನೆ ಹೇಳಿರಿ: ಪಥಭ್ರಷ್ಟತೆಗೊಳಗಾಗಿರುವವನಿಗೆ ಅಂತಹವರೊಡನೆ ಮಾಡಲ್ಪಟ್ಟ ವಾಗ್ದಾನವನ್ನು ಅವರು ಕಣ್ಣಾರೆ ಕಂಡುಕೊಳ್ಳುವವರೆಗೂ ರಹ್ಮಾನನು ಸಡಿಲು ಬಿಡುತ್ತಾನೆ. ಅದು ಯಾತನೆಯಾಗಿರಲಿ ಅಥವಾ ಅಂತಿಮ ಘಳಿಗೆಯಾಗಿರಲಿ - ಆಗ ಅವರಿಗೆ ಯಾರ ಸ್ಥಿತಿ ಕೆಟ್ಟಿದೆ ಮತ್ತು ಯಾವ ಕೂಟ ದುರ್ಬಲವಾಗಿದೆ ಎಂದು ಗೊತ್ತಾಗಿಬಿಡುತ್ತದೆ.

قُلْ مَن كَانَ فِي الضَّلَالَةِ فَلْيَمْدُدْ لَهُ
الرَّحْمَٰنُ مَدًّا ۚ حَتَّىٰ إِذَا رَأَوْا مَا
يُوعَدُونَ إِمَّا الْعَذَابَ وَإِمَّا السَّاعَةَ
فَسَيَعْلَمُونَ مَنْ هُوَ شَرٌّ مَّكَانًا
وَأَضْعَفُ جُندًا ﴿٧٥﴾

76. ಇದಕ್ಕೆ ವ್ಯತಿರಿಕ್ತವಾಗಿ ಸನ್ಮಾರ್ಗವನ್ನು ಕೈಗೊಂಡವರಿಗೆ ಅಲ್ಲಾಹ್, ಅವರ ಸನ್ಮಾರ್ಗದಲ್ಲಿ ವೃದ್ಧಿಯನ್ನು ದಯಪಾಲಿಸುತ್ತಾನೆ ಮತ್ತು ಬಾಕಿ ಉಳಿಯುವ ಪುಣ್ಯಗಳೇ ನಿಮ್ಮ ಪ್ರಭುವಿನ ಬಳಿ ಸತ್ಫಲ ಹಾಗೂ ಪರಿಣಾಮದ ದೃಷ್ಟಿಯಿಂದ ಉತ್ತಮವಾಗಿವೆ.

وَيَزِيدُ اللَّهُ الَّذِينَ اهْتَدَوْا هُدًى ۗ
وَالْبَاقِيَاتُ الصَّالِحَاتُ خَيْرٌ عِندَ رَبِّكَ
ثَوَابًا وَخَيْرٌ مَّرَدًّا ﴿٧٦﴾

77. ನಮ್ಮ ವಚನಗಳನ್ನು ನಿರಾಕರಿಸುತ್ತ, "ನಾನಂತು ಸಂಪತ್ತು ಮತ್ತು ಸಂತತಿಗಳನ್ನು ಖಂಡಿತವಾಗಿಯೂ ಪಡೆಯುತ್ತಲೇ ಇರುವೆನು" ಎನ್ನುವವನನ್ನು ಕಂಡಿರಾ?

أَفَرَأَيْتَ الَّذِي كَفَرَ بِآيَاتِنَا وَقَالَ
لَأُوتَيَنَّ مَالًا وَوَلَدًا ﴿٧٧﴾

78. ಇವನಿಗೆ ಅಗೋಚರ ವಿಷಯಗಳ ಸುಳಿವು ಸಿಕ್ಕಿ ಬಿಟ್ಟಿರುವುದೇ? ಅಥವಾ ಇವನು ರಹ್ಮಾನನಿಂದ ಏನಾದರೂ ಕರಾರು ಪಡೆದಿರುವನೇ?

أَطَّلَعَ الْغَيْبَ أَمِ اتَّخَذَ عِندَ الرَّحْمَٰنِ
عَهْدًا ﴿٧٨﴾

79. ಎಷ್ಟು ಮಾತ್ರಕ್ಕೂ ಇಲ್ಲ. ಇವನು ಒದರುತ್ತಿರುವುದನ್ನು ನಾವು ಬರೆದಿಟ್ಟುಕೊಳ್ಳುವೆವು ಮತ್ತು ಇವನಿಗೆ ಶಿಕ್ಷೆಯನ್ನು ಇನ್ನಷ್ಟು ವರ್ಧಿಸುವೆವು.

كَلَّا ۚ سَنَكْتُبُ مَا يَقُولُ وَنَمُدُّ لَهُ
مِنَ الْعَذَابِ مَدًّا ﴿٧٩﴾

80. ಯಾವ ಸಾಧನಾನುಕೂಲತೆಗಳ ಕುರಿತು ಇವನು ಹೇಳುತ್ತಿರುವನೋ ಅವೆಲ್ಲವುಗಳಿಗೆ ನಾವೇ ವಾರೀಸುದಾರರಾಗುವೆವು ಮತ್ತು ಇವನು ಒಬ್ಬಂಟಿಗನಾಗಿ ನಮ್ಮ ಮುಂದೆ ಹಾಜರಾಗುವನು.

وَنَرِثُهُ مَا يَقُولُ وَيَأْتِينَا فَرْدًا ﴿٨٠﴾

81. ಇವರು ಅಲ್ಲಾಹನನ್ನು ಬಿಟ್ಟು ಇತರ ಕೆಲವು ದೇವರುಗಳನ್ನು ಮಾಡಿಕೊಂಡಿದ್ದಾರೆ. ಅವರು ಇವರ ಬೆಂಬಲಿಗರಾದಾರೆಂದು-

وَاتَّخَذُوا مِن دُونِ اللَّهِ آلِهَةً لِّيَكُونُوا
لَهُمْ عِزًّا ﴿٨١﴾

82. ಯಾವ ಬೆಂಬಲಿಗನೂ ಇರಲಾರನು. ಅವರೆಲ್ಲರೂ ಇವರ ದಾಸ್ಯ-ಆರಾಧನೆಯನ್ನು ನಿರಾಕರಿಸುವರು ಮಾತ್ರವಲ್ಲ ತಿರುಗಿ ಇವರ ವಿರೋಧಿಗಳೇ ಆಗಿಬಿಡುವರು.

كَلَّا ۚ سَيَكْفُرُونَ بِعِبَادَتِهِمْ وَيَكُونُونَ
عَلَيْهِمْ ضِدًّا ﴿٨٢﴾

83. ನಾವು ಸತ್ಯನಿಷೇಧಿಗಳ ಮೇಲೆ, ಅವರನ್ನು (ಸತ್ಯವನ್ನು ವಿರೋಧಿಸಲಿಕ್ಕಾಗಿ) ಚೆನ್ನಾಗಿ ಹುರಿದುಂಬಿಸುತ್ತಿರುವ ಶೈತಾನರನ್ನು ಬಿಟ್ಟಿರುವುದನ್ನು ನೀವು ಕಂಡಿಲ್ಲವೇ?

أَلَمْ تَرَ أَنَّا أَرْسَلْنَا الشَّيَاطِينَ عَلَى
الْكَافِرِينَ تَؤُزُّهُمْ أَزًّا ﴿٨٣﴾

84. ಆದುದರಿಂದ ಇನ್ನು ಇವರ ಮೇಲೆ ಯಾತನೆಯನ್ನೆರಗಿಸಲಿಕ್ಕಾಗಿ ಕಾತರರಾಗಬೇಡಿರಿ. ನಾವು ಇವರ ದಿನಗಳನ್ನು ಎಣಿಕೆಮಾಡುತ್ತಿದ್ದೇವೆ.

فَلَا تَعْجَلْ عَلَيْهِمْ ۖ إِنَّمَا نَعُدُّ
لَهُمْ عَدًّا ﴿٨٤﴾

85-86. ನಾವು 'ಧರ್ಮನಿಷ್ಠ'ರನ್ನು ರಹ್ಮಾನನ ಸನ್ನಿಧಿಯಲ್ಲಿ ಅತಿಥಿಗಳಂತೆ ಮುಂದೆ ತರುವ ಮತ್ತು ಅಪರಾಧಿಗಳನ್ನು ದಾಹಗೊಂಡ ಪ್ರಾಣಿಗಳಂತೆ ನರಕದ ಕಡೆಗೆ ಅಟ್ಟಿಕೊಂಡು ಹೋಗುವ ದಿನ ಬರಲಿದೆ.

يَوْمَ نَحْشُرُ الْمُتَّقِينَ إِلَى الرَّحْمَٰنِ وَفْدًا ﴿٨٥﴾ وقف لازم
وَنَسُوقُ الْمُجْرِمِينَ إِلَىٰ جَهَنَّمَ وِرْدًا ﴿٨٦﴾

87. ಆಗ ರಹ್ಮಾನನ ಸನ್ನಿಧಾನದಿಂದ ಅನುಮತಿ ಪಡೆದು ಕೊಂಡವನ ಹೊರತು ಜನರು ಯಾವ ಶಿಫಾರಸನ್ನೂ ತರಲು ಶಕ್ತರಾಗಲಾರರು.

لَا يَمْلِكُونَ الشَّفَاعَةَ إِلَّا مَنِ اتَّخَذَ وقف لازم
عِنْدَ الرَّحْمَٰنِ عَهْدًا ﴿٨٧﴾

88. ರಹ್ಮಾನನು ಪುತ್ರನನ್ನು ಹೊಂದಿದ್ದಾನೆಂದು ಅವರು ಹೇಳುತ್ತಾರೆ.

وَقَالُوا اتَّخَذَ الرَّحْمَٰنُ وَلَدًا ﴿٨٨﴾

89. ನೀವು ಸೃಷ್ಟಿಸಿ ತಂದಿರುವ ಈ ಮಾತು ತೀರಾ ಅಸಂಬದ್ಧ.

لَقَدْ جِئْتُمْ شَيْئًا إِدًّا ﴿٨٩﴾

90-91. ರಹ್ಮಾನನಿಗೆ ಪುತ್ರನಿರುವನೆಂದು ಜನರು ಆಪಾದಿಸಿದುದಕ್ಕಾಗಿ ಆಕಾಶ ಸಿಡಿದು ಬೀಳುವ, ಭೂಮಿ ಬಿರಿಯುವ ಮತ್ತು ಪರ್ವತಗಳು ಬಿದ್ದು ಹೋಗುವ ಸಮಯ ಸನ್ನಿಹಿತವಾಗಿದೆ.

تَكَادُ السَّمَاوَاتُ يَتَفَطَّرْنَ مِنْهُ وَتَنْشَقُّ
الْأَرْضُ وَتَخِرُّ الْجِبَالُ هَدًّا ﴿٩٠﴾
أَنْ دَعَوْا لِلرَّحْمَٰنِ وَلَدًا ﴿٩١﴾

92. ಯಾರನ್ನಾದರೂ ತನ್ನ ಮಗನನ್ನಾಗಿ ಮಾಡಿಕೊಳ್ಳುವುದು ರಹ್ಮಾನನಿಗೆ ಶೋಭಿಸುವುದಿಲ್ಲ.

وَمَا يَنْبَغِي لِلرَّحْمَٰنِ أَنْ يَتَّخِذَ وَلَدًا ﴿٩٢﴾

93. ಭೂಮಿ-ಆಕಾಶಗಳಲ್ಲಿರುವವರೆಲ್ಲರೂ ಅಲ್ಲಾಹನ ಸನ್ನಿಧಿಯಲ್ಲಿ ದಾಸರ ನೆಲೆಯಲ್ಲಿ ಹಾಜರಾಗಲಿರುವರು.

إِنْ كُلُّ مَنْ فِي السَّمَاوَاتِ وَالْأَرْضِ
إِلَّا آتِي الرَّحْمَٰنِ عَبْدًا ﴿٩٣﴾

94. ಅವನು ಎಲ್ಲರನ್ನೂ ಆವರಿಸಿಕೊಂಡಿದ್ದಾನೆ. ಅವನು ಅವರನ್ನು ಎಣಿಕೆ ಮಾಡಿಟ್ಟಿರುತ್ತಾನೆ.

لَقَدْ أَحْصَاهُمْ وَعَدَّهُمْ عَدًّا ﴿٩٤﴾

95. ಪುನರುತ್ಥಾನದ ದಿನದಂದು ಎಲ್ಲರೂ ಅವನ ಮುಂದೆ ಒಬ್ಬೊಬ್ಬ ರಾಗಿ ಹಾಜರಾಗುವರು.

وَكُلُّهُمْ اٰتِيْهِ يَوْمَ الْقِيٰمَةِ فَرْدًا ﴿٩٥﴾

96. ನಿಶ್ಚಯವಾಗಿಯೂ ಸತ್ಯವಿಶ್ವಾಸವಿರಿಸಿಕೊಂಡು ಸತ್ಕರ್ಮವೆಸಗುತ್ತಿರುವವರಿಗಾಗಿ (ಜನರ) ಹೃದಯಗಳಲ್ಲಿ ರಹ್ಮಾನನು ಸದ್ಯವೇ ಅನುರಾಗವನ್ನುಂಟು ಮಾಡುವನು.[17]

اِنَّ الَّذِيْنَ اٰمَنُوْا وَعَمِلُوا الصّٰلِحٰتِ سَيَجْعَلُ لَهُمُ الرَّحْمٰنُ وُدًّا ﴿٩٦﴾

97. ಆದುದರಿಂದ ಓ ಪೈಗಂಬರರೇ, ನೀವು ಭಯಭಕ್ತಿಯನ್ನಿರಿಸಿಕೊಂಡಿರುವವರಿಗೆ ಸುವಾರ್ತೆಯನ್ನೀಯಲಿಕ್ಕಾಗಿ ಹಾಗೂ ಹಟಸಾಧಕರಿಗೆ ಎಚ್ಚರಿಕೆ ಕೊಡಲಿಕ್ಕಾಗಿಯೇ ನಾವು ಈ ವಾಣಿಯನ್ನು ಸರಳಗೊಳಿಸಿ ನಿಮ್ಮ ಭಾಷೆಯಲ್ಲಿ ಅವತೀರ್ಣಗೊಳಿಸಿರುತ್ತೇವೆ.

فَاِنَّمَا يَسَّرْنٰهُ بِلِسَانِكَ لِتُبَشِّرَ بِهِ الْمُتَّقِيْنَ وَتُنْذِرَ بِهٖ قَوْمًا لُّدًّا ﴿٩٧﴾

98. ಇವರಿಗಿಂತ ಮುಂಚೆ ನಾವು ಎಷ್ಟೋ ಜನಾಂಗಗಳನ್ನು ನಾಶಗೊಳಿಸಿರುತ್ತೇವೆ. ಇಂದು ನಿಮಗೆ ಅವುಗಳ ಸುಳಿವೇನಾದರೂ ಸಿಗುತ್ತಿದೆಯೇ ಅಥವಾ ಕಿಂಚಿತ್ ಧ್ವನಿಯಾದರೂ ಎಲ್ಲಾದರೂ ಕೇಳಿಸುತ್ತಿದೆಯೇ?

وَكَمْ اَهْلَكْنَا قَبْلَهُمْ مِّنْ قَرْنٍ ۭ هَلْ تُحِسُّ مِنْهُمْ مِّنْ اَحَدٍ اَوْ تَسْمَعُ لَهُمْ رِكْزًا ﴿٩٨﴾

---

17. ಅರ್ಥಾತ್- ಇಂದು ಅವರನ್ನು ಮಕ್ಕಾದ ಕೇರಿಗಳಲ್ಲಿ ಅಪಮಾನಕ್ಕೆ ಗುರಿಪಡಿಸಲಾಗುತ್ತಿದೆ. ಆದರೆ ಈ ಪರಿಸ್ಥಿತಿ ದೀರ್ಘಕಾಲ ಇರಲಾರದು. ತಮ್ಮ ಸತ್ಕರ್ಮ ಮತ್ತು ಸಚ್ಚಾರಿತ್ರ್ಯದಿಂದಾಗಿ ಅವರು ಅತ್ಯಂತ ಜನಪ್ರಿಯರಾಗಿ ಮಾರ್ಪಡುವ ದಿನ ದೂರವಿಲ್ಲ. ಮನಸ್ಸುಗಳು ಅವರೆಡೆಗೆ ಸೆಳೆಯಲ್ಪಡುವುದು, ಜಗತ್ತು ಅವರನ್ನು ಗೌರವದ ದೃಷ್ಟಿಯಿಂದ ನೋಡುವುದು. ದುರಾಚಾರ, ಕೆಡುಕುಗಳು, ದುರಹಂಕಾರ, ಅಹಂಭಾವ, ಸುಳ್ಳು ಮತ್ತು ತೋರಿಕೆಯ ಆಧಾರದಲ್ಲಿ ನಡೆಯುತ್ತಿರುವ ನಾಯಕತ್ವವು ಜನರನ್ನು ತಲೆಬಾಗುವಂತೆ ಮಾಡೀತು. ಆದರೆ ಜನಮನವನ್ನು ಗೆಲ್ಲಲು ಅದಕ್ಕೆ ಸಾಧ್ಯವಾಗಲಾರದು. ಅದರ ಬದಲು ಸತ್ಯ, ಪ್ರಾಮಾಣಿಕತೆ, ನಿಸ್ವಾರ್ಥತೆ ಮತ್ತು ಸಚ್ಚಾರಿತ್ರ್ಯದೊಂದಿಗೆ ಸನ್ಮಾರ್ಗದೆಡೆಗೆ ಕರೆಯುವವರಿಂದ ಮೊದಮೊದಲು ಜಗತ್ತು ಎಷ್ಟೇ ಬೇಸತ್ತರೂ, ಕೊನೆಗೆ ಅದು ಜನಮನವನ್ನು ಗೆಲ್ಲುವುದು. ಅಪ್ರಾಮಾಣಿಕ ವ್ಯಕ್ತಿಗಳು ಹೆಣೆಯುವ ಸುಳ್ಳುಗಳು ಹೆಚ್ಚು ಕಾಲ ಅವರ ದಾರಿಯನ್ನು ತಡೆಯುವಲ್ಲಿ ಸಫಲವಾಗಲಾರವು.